ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ,
ಚನ್ನರಾಯಪಟ್ಟಣ

**ಸಿಸಿ ನಂ.7/2026**

| | | |
|---|---|---|
| ಪಿರ್ಯಾದುದಾರರು :- | -ವಿರುದ್ಧ - | ಆರೋಪಿತರುಗಳು :- |
| ಶ್ರವಣಬೆಳಗೊಳ ಪೊಲೀಸ್ ಠಾಣೆ | | ರವಿ ಬಿನ್ ಸಿದ್ದಶೆಟ್ಟಿ<br>50 ವರ್ಷ,<br>ವಾಸಃ ಮಸೀದಿ ಬೀದಿ,<br>ಶ್ರವಣಬೆಳಗೊಳ ಟೌನ್,<br>ಶ್ರವಣಬೆಳಗೊಳ ಹೋಬಳಿ,<br>ಚನ್ನರಾಯಪಟ್ಟಣ ತಾಲ್ಲೂಕು<br>ಹಾಸನ ಜಿಲ್ಲೆ. |

ಹೆಚ್.ಕೆ.ನವೀನ, ಎಲ್.ಎಲ್.ಬಿ., ಎಲ್.ಎಲ್.ಎಂ., ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಚನ್ನರಾಯಪಟ್ಟಣ ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆಪಾದನೆ.

:: **ಆಪಾದನೆ** ::

ದಿನಾಂಕಃ 02.11.2025 ರಂದು ಮಧ್ಯಾಹ್ನ 12-30 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ತಾಲ್ಲೂಕು, ಶ್ರವಣಬೆಳಗೊಳ ಪೊಲೀಸ್ ಠಾಣಾ ಸರಹದ್ದಿನಲ್ಲಿ ಚಾಸಾ-1 ಸುಕನ್ಯರವರ ಗಂಡ ಉಮೇಶರವರು ಶ್ರವಣಬೆಳಗೊಳದಿಂದ ಸಾಸಲು ಗ್ರಾಮಕ್ಕೆ ಹೋಗಲು ಶ್ರವಣಬೆಳಗೊಳದಿಂದ ಕೆಎ-54-0917 ರ ಪ್ಯಾಸೇಂಜರ್ ಆಟೋದಲ್ಲಿ ಹೋಗುತ್ತಿದ್ದಾಗ ಆರೋಪಿಯಾದ ನೀವು ಕೆಎ-54-0917 ರ ಪ್ಯಾಸೇಂಜರ್ ಆಟೋವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಶ್ರವಣಬೆಳಗೊಳ-ಕಿಕ್ಕೇರಿ ಮುಖ್ಯರಸ್ತೆಯ ಗುರಿಗಾರನಹಳ್ಳಿ ಗ್ರಾಮದ ರಸ್ತೆಯಲ್ಲಿನ ಗುಂಡಿಗೆ ಇಳಿಸಿದಾಗ ಆಟೋ ಹಿಂಬದಿಯಲ್ಲಿ ಕುಳಿತಿದ್ದ ಉಮೇಶರವರು ಆಟೋವಿನಿಂದ ಕೆಳಗೆ ಬಿದ್ದು ಉಮೇಶರವರ ತಲೆಗೆ ಪೆಟ್ಟುಬಿದ್ದು ಕಿವಿಯಲ್ಲಿ ಮತ್ತು ಮೂಗಿನಲ್ಲಿ ರಕ್ತಸ್ರಾವ ಉಂಟಾಗಿದ್ದವರನ್ನು ಚಾಸಾ-2, ಚಾಸಾ-3 ರವರು ಎತ್ತಿ ಸುಧಾರಿಸಿ ಆರೋಪಿಯ ಆಟೋದಲ್ಲಿ ಶ್ರವಣಬೆಳಗೊಳ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿ ನಂತರ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆಗೆ ಆಂಬುಲೆನ್ಸ್ ವಾಹನದಲ್ಲಿ

ಚನ್ನರಾಯಪಟ್ಟಣ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿದ್ದು, ಆದರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಉಮೇಶರವರು ಮೃತಪಟ್ಟಿದ್ದು ಕಾರಣ ಬಿ ಎನ್ ಎಸ್ ಕಲಂ **281 ಮತ್ತು 106** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ಒಳಗೆ ಮಾಡಿರುವಿರಿ.

2. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತರಾದ ನೀವು ವಿಮೆ ಇಲ್ಲದ ಹಾಗೂ ಎಫ್.ಸಿ ಮುಕ್ತಾಯಗೊಂಡಿರುವ ವಾಹನವನ್ನು ಚಾಲನೆ ಮಾಡಿ **ಐಎಂವಿ ಆಕ್ಟ್ ಕಲಂ 196 ಮತ್ತು 192** ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದ ಒಳಗೆ ಮಾಡಿರುವಿರಿ.

ನಿಮ್ಮ ಮೇಲೆ ಮೇಲ್ಕಂಡ ದಂಡನೀಯ ಆಪಾದನೆಗಳ ವಿಚಾರಣೆ ಈ ನ್ಯಾಯಾಲಯದ ಮುಂದೆ ನಡೆಯತಕ್ಕದೆಂದು ನಿರ್ದೇಶಿಸುತ್ತೇನೆ.

1) ಪ್ರಶ್ನೆಃ-ಈಗ ನಿಮಗೆ ಓದಿ ಹೇಳಲಾದ ಆಪಾದನೆ ನಿಮಗೆ ಅರ್ಥವಾಯಿತೇ?
ಉತ್ತರಃ-

2) ಪ್ರಶ್ನೆಃ- ನೀವು ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾಗಿದೆಯೇ ?
ಉತ್ತರಃ-

ದಿನಾಂಕಃ 19.06.2026 ರಂದು ಆರೋಪಿಗೆ ಆಪಾದನೆಗಳ ಸಾರಾಂಶವನ್ನು ತೆರೆದ ನ್ಯಾಯಾಲಯದಲ್ಲಿ ಓದಿ ವಿವರಿಸಿ ಹೇಳಿದಾಗ ಆತನು ಕೊಟ್ಟ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಲಾಗಿದೆ ಮತ್ತು ಸತ್ಯವಾಗಿದೆ ಅಂತ ನಾನು ದೃಢಪಡಿಸುತ್ತೇನೆ.

**(ಹೆಚ್ ಕೆ ನವೀನ)**
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಚನ್ನರಾಯಪಟ್ಟಣ.